53. M/s. Ranganatha Group, Bangalore	Tumkur District	15000000	3898000	15000000
54. M. Sridhar, Malpe, Udupi	Uttara-Kannada District	6514000	—	6204000
	TOTAL:	328980930	167570480	306667703

ಬಚಾವತ್ ತೀರ್ಪಿನಂತೆ ಕೃಷ್ಣಾನದಿ ನೀರಿನ ಪಾಲು.

(30) ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಚಾವತ್ ಆಯೋಗದ ತೀರ್ಪಿನಂತೆ ಕೃಷ್ಣಾನದಿ ನೀರಿನಲ್ಲಿ ಕರ್ನಾಟಕ್ಕೆ ಬಂದ ನೀರಿನ ಹಕ್ಕು (ಸ್ಕೀಮ್–ಎ ಮತ್ತು ಸ್ಕೀಮ್ – ಬಿ ಸೇರಿ) ಎಷ್ಟು ?

ಆ) ಈ ಹಕ್ಕನ್ನು 2000ನೇ ಇಸವಿಯೊಳಗಾಗಿ ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು ?

ಇ) ಒಂದು ಪಕ್ಷ ಇದು ಸಾಧ್ಯವಾಗದಿದ್ದಲ್ಲಿ ನಮಗೆ ಬಂದಿರುವ ಈ ನೀರಿನ ಹಕ್ಕನ್ನು ಉಳಿಸಿಕೊಳ್ಳಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ?

ಈ) ಪೂರ್ಣ ಬಳಸಿಕೊಳ್ಳಲು ಬೇಕಾಗುವ ಒಟ್ಟು ಹಣವೆಷ್ಟು ಹಾಗೂ ಈ ವರ್ಷದ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು ?

ಉ) ಸಂಪನ್ಮೂಲ ಕ್ರೋಢೀಕರಿಸಲು ಸರ್ಕಾರ ಮಾಡಿರುವ ಪ್ರಯತ್ನಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) ಬಚಾವತ್ ಆಯೋಗದ ಪ್ರಕಾರ ಕೃಷ್ಣಾ ನದಿ ನೀರಿನಲ್ಲಿ ಕರ್ನಾಟಕಕ್ಕೆ ಬಂದ ನೀರಿನ ಹಕ್ಕು ಸ್ಕೀಮ್ 'ಎ' ಮತ್ತು 'ಬಿ' ಪ್ರಕಾರ ಈ ಕೆಳಕಂಡಂತೆ ಇದೆ.

	ಟಿ.ಎಂ.ಸಿ.
1. ಸ್ಕೀಮ್ 'ಎ' ಪ್ರಕಾರ ಕೃಷ್ಣಾ ನದಿಯಿಂದ ಬಂದ ನೀರು (ರೀಜನರೇಷನ್ ಸೇರಿ)	734.00
2. ಗೋದಾವರಿ ನದಿಯಿಂದ ಕೃಷ್ಣಾನದಿಗೆ ಬಂದ ನೀರು (ರೀಜನರೇಷನ್ ಸೇರಿ)	23.00
3) ಸ್ಕೀಮ್ 'ಬಿ'ಯಿಂದ ಹೆಚ್ಚುವರಿ ನೀರು ಕೃಷ್ಣಾ ನದಿಯಿಂದ ಕರ್ನಾಟಕಕ್ಕೆ ಬರುವಂತಹುದು (ರೀಜನರೇಷನ್ ಸೇರಿ)	183.00
ಒಟ್ಟು	940.00

ಆ) ಎರಡು ಸಾವಿರದ ಇಸವಿಯೊಳಗೆ ಸ್ಕೀಮ್ 'ಎ'ಯಿಂದ ಬಂದ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಲು ಪ್ರಸ್ತುತ ಕಾರ್ಯರೂಪದಲ್ಲಿರುವ ಹಾಗೂ ನಿರ್ಮಾಣಗೊಳ್ಳುತ್ತಿರುವ ಎಲ್ಲಾ

ಯೋಜನೆಗಳಿಂದ ಕೃಷ್ಣಾ ಕೊಳ್ಳದಲ್ಲಿ 646 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಈ ನೀರನ್ನು ಬಳಸಿಕೊಳ್ಳಲು ಯೋಜನೆಗಳು ಪ್ರಗತಿಯಲ್ಲಿದ್ದು ತ್ವರಿತ ಗತಿಯಲ್ಲಿ ಈ ಯೋಜನೆಗಳನ್ನು ಪೂರ್ಣಗೊಳಿಸಲು ಮತ್ತು ಉಳಿದ ನೀರನ್ನು ಬಳಸಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಇಂದಿನ ದರದ ಪ್ರಕಾರ 3270 ಕೋಟಿ. ರೂ. ಗಳು. ಈ ವರ್ಷದ ಆಯವ್ಯಯದಲ್ಲಿ 248.30 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಉ) ಕರ್ನಾಟಕ ಕೃಷ್ಣಾ ಕೊಳ್ಳದ ಅಭಿವೃದ್ಧಿ ಪ್ರಾಧಿಕಾರ ರಚನೆ ಮತ್ತು ನೀರಾವರಿ ಬಾಂಡ್‌ಗಳ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಅನುಮತಿಗಾಗಿ ವ್ಯವಹರಿಸಲಾಗುತ್ತಿದೆ.

ಸಂದೇಶ

ಉಪಾಧ್ಯಕ್ಷರು:– ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ನನಗೆ ಮಾನ್ಯ ಸಭಾಧ್ಯಕ್ಷರಿಂದ ಒಂದು ಪತ್ರ ಬಂದಿದೆ, ಅದನ್ನು ಸಭೆಯ ಮುಂದಿಡುತ್ತೇನೆ.

ದಿನಾಂಕ 28–12–1992ರಂದು ಮಾನ್ಯ ಸಭಾಧ್ಯಕ್ಷರಿಂದ ಈ ಕೆಳಕಂಡಂತೆ ಸಂದೇಶ ಬಂದಿರುತ್ತದೆ.

ಪೂರ್ವ ನಿರ್ಧರಿತ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಬೇಕಾಗಿರುವುದರಿಂದ ದಿನಾಂಕ 28ರಿಂದ 10 ದಿವಸಗಳ ಕಾಲ ಬೆಂಗಳೂರಿನಿಂದ ಹೊರಗೆ ಉಳಿಯಬೇಕಾದುದು ಅನಿವಾರ್ಯವಾಗಿದೆ. ಈ ಕಾರಣದಿಂದಾಗಿ ವಿಧಾನಸಭೆಯ ಕಾರ್ಯಕಲಾಪಗಳನ್ನು ತಾವು ನಡೆಸಿಕೊಂಡು ಹೋಗಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನ ನಡೆಯುವ ಸಂದರ್ಭದಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಗೈರುಹಾಜರಾದಂತಹ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ವಹಿಸಲು ನೇಮಿಸಲಾಗಿದೆ.

ಡಾ: ಎ.ಬಿ. ಮಲಕರೆಡ್ಡಿ
ಶ್ರೀಮತಿ ಮೋಟಮ್ಮ
ಶ್ರೀ ಕೆ.ಬಿ. ಕೋಳಿವಾಡ್
ಶ್ರೀ ಡಿ.ಎ. ಚಿನ್ನಪ್ಪ
ಶ್ರೀ ಬಸವರಾಜ ಪಾಟೀಲ್ ಅಟ್ಟೂರು
ಶ್ರೀಮತಿ ದಮಯಂತಿ ಬೋರೇಗೌಡ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೆ, ದಿನಾಂಕ 29–12–92ರ ಲಿಖಿತ ಮೂಲಕ ಉತ್ತರಿಸುವ ಎರಡನೆಯ ಪಟ್ಟಿಯಲ್ಲಿರುವ 101 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 27, 28, 51, 190, 200, 241, 242, 308, 308ಎ, 723, 718, 589, 573, 580,749, 794ಮತ್ತು 246 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 84ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಹಾಗೂ ದಿನಾಂಕ 28–12–92ರ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಹ ಸಭೆಯ ಮುಂದೆ ಮಂಡಿಸುತ್ತೇನೆ.